ಎಂ.ಎ. ಕುಮಾರ್, ಬೆಂಗಳೂರು
*ಕೂದಲು ಬೆಳೆಯಲು ಕೇಶವರ್ಧಿನಿ. ಬುದ್ಧಿ ವೃದ್ಧಿಯಾಗಲು?*



ಕ್ಲೇಶ ಮರ್ದಿನಿ.

ಅರ್ಪಣ್ ಎಸ್.ಎಂ., ಶ್ರವಣಬೆಳಗೊಳ
*ಫ್ಯಾಷನ್ ಮಾಡಿಕೊಳ್ಳಲು ಪಟ್ಟಣದ ಹುಡುಗಿಯರಿಗೆ ಇರುವಷ್ಟು ಸ್ವಾತಂತ್ರ್ಯ ಹಳ್ಳಿಯ ಹುಡುಗಿಯರಿಗೇಕಿಲ್ಲ?*
ಏಕೆಂದರೆ ಗ್ರಾಮಗಳಲ್ಲಿ ವಿಕೃತಿಗಿಂತ ಸಂಸ್ಕೃತಿಗೇ ಒತ್ತು.

ದಿನೇಶ್, ಗುಡ್ಡದೂರು
*ಹೆಂಗಸರನ್ನು ಮಾತ್ರ ಹೂವಿಗೆ ಹೋಲಿಸುತ್ತಾರಲ್ಲ, ಗಂಡಸರನ್ನೇಕೆ ಹೋಲಿಸುವುದಿಲ್ಲ ರಾಮ್?*
ತವರಿನಲ್ಲೂ (ಗಿಡಕ್ಕೂ), ಹೋದೆಡೆಯೂ (ಮುಡಿ, ಶ್ರೀ–ಪಾದ) ಕಂಪೆಸೆಯುವ ಗುಣ ಹೂ, ಹೆಣ್ಣಿಗೇ ಸೀಮಿತವಾದ್ದರಿಂದ.

ಜಾಕೋಬ್ ಡಿಸೋಜ, ಕುರುವಳ್ಳಿ
*ಹಾಸ್ಯಕ್ಕೂ, ಹಾಸ್ಯಾಸ್ಪದಕ್ಕೂ ವ್ಯತ್ಯಾಸವೇನು?*



ಒಂದೇ ಇಂಚು! ತುಟಿ ಬಿರಿದರೆ ಹಾಸ್ಯ; ಮೂಗು ಮುರಿದರೆ ಹಾಸ್ಯಾಸ್ಪದ.

ನವಿರವಿ, ಬಾಳೆಹೊನ್ನೂರು
*ಶಿವ, ವಿಷ್ಣುವಿಗೆ ಇಲ್ಲದ ಬಿಳಿ ಕೂದಲು ಬ್ರಹ್ಮನಿಗೇಕೆ?*
ನಿರಂತರ ಕೆಲಸವಲ್ಲವೆ! ವರ್ಕ್ ಪ್ರೆಷರ್ ಜಾಸ್ತಿಯಾದರೆ ಬೇಗ ವಯಸ್ಸಾಗುತ್ತದೆ.

ಬಿ.ಎಲ್. ಸೀತಾರಾಮಾಚಾರಿ, ದಾವಣಗೆರೆ
*ಸಾಯುತ್ತಿರುವವರ ತುಟಿಯ ಮೇಲೆ ಸತ್ಯವಲ್ಲದೆ ಬೇರೇನೂ ಇರದು. ಬದುಕಿರುವವರ ತುಟಿಯ ಮೇಲೆ?*
ಗಂಡಾದರೆ ಮೀಸೆ; ಹೆಣ್ಣಾದರೆ ಲಿಪ್‌ಸ್ಟಿಕ್.

ಬಿ.ಎಂ. ಶಿವಲಿಂಗೇಗೌಡ, ಬೇವಿನಹಳ್ಳಿ
*ಎಂತಹ ಶೂರನಾದರೂ ಒಮ್ಮೆಯಾದರೂ ಹೆಂಡತಿಗೆ ಹೆದರುತ್ತಾನೆ. ಏಕೆ ಸಾರ್?*
ಶೌರ್ಯದಿಂದಾಗುವ ಓವರ್ ಸ್ಪೀಡ್, ಆಕ್ಸಿಡೆಂಟ್‌ಗಳಿಗೆ ಅವಳು ತೀವ್ರ ಶಿಕ್ಷೆ ವಿಧಿಸುವುದರಿಂದ.

ಪಿ. ಗೋವಿಂದರಾಜ್, ಶಿವಮೊಗ್ಗ
*ಮೋಡ–ಮೋಡ ಢಿಕ್ಕಿ ಹೊಡೆದರೆ ಮಳೆ. ಹುಡುಗ–ಹುಡುಗಿ ಢಿಕ್ಕಿ ಹೊಡೆದರೆ?*
ರಣಕಹಳೆ!

ವಿ. ಹಮೀದ್, ವಿಟ್ಲ
*ತಾಳ್ಮೆಗೆಟ್ಟ ಹೆಣ್ಣು ಹೇಗಿರುತ್ತಾಳೆ ಸಾರ್?*
ಲೀಕ್ ಆಗುತ್ತಿರುವ ಗ್ಯಾಸ್ ಸಿಲಿಂಡರ್‌ನಂತೆ; ಒಂದೇ ಒಂದು ಕಿಡಿಗೆ – ಢಂ!

ಎಂ.ಜಿ. ನಾಗರತ್ನ, ಬೆಂಗಳೂರು
*ಮಗುವಿಗೂ, ಮುದುಕರಿಗೂ ಇರುವ ವ್ಯತ್ಯಾಸವೇನು?*
ಹೇಳಿದ್ದನ್ನೇ ಪದೇ ಪದೇ ಮಗು ಹೇಳಿದರೆ ಮಾಡುವರು ಮುದ್ದು; ಮುದುಕರು ಹೇಳಿದರೆ ಹೋಗುವರು ಎದ್ದು.

ಚೆನ್ನವೀರ ನಾಲ್ವಾಡ, ಚಿಕ್ಕೇನಕೊಪ್ಪ
*ನಮ್ಮದು ಸಾಲಮುಕ್ತ ದೇಶವಾಗಬಹುದೆ?*
ಆಗಬಹುದು. ಕೊಟ್ಟ ಸಾಲವನ್ನೆಲ್ಲ ಮನ್ನಾ ಮಾಡಿಬಿಟ್ಟರಾಯ್ತು!

ತಲಕಾಡು ಶ್ರೀನಿಧಿ, ಬೆಂಗಳೂರು
*ಗದ್ದುಗೆ 'ಏರಬೇಕಾದರೆ' ರಾಜಕೀಯಕ್ಕೆ 'ಇಳಿಯಲೇಬೇಕು' ಅಲ್ಲವೆ?*
ನಿಜ. ಟ್ರೀಟ್‌ಮೆಂಟ್ ಪ್ಲಾಂಟ್ ತಲುಪಬೇಕಾದರೆ ಹೊಲಸು ಪೈಪುಗಳಲ್ಲಿ ಪಯಣ ಅನಿವಾರ್ಯ.

ಕೆ.ಪಿ. ರಾಮಗುಂಡಿ, ಬೈಲಹೊಂಗಲ
*ಸತ್ಯಕ್ಕೆ ಸಾವಿಲ್ಲ; ಸುಳ್ಳಿಗೆ ಸುಖವಿಲ್ಲ; ಅರ್ಧಸತ್ಯಕ್ಕೆ?*
ಊರೆಲ್ಲ ಬಂಗಲೆ, ಅರಮನೆ, ಸದನ, ಸೌಧ, ವಿಲ್ಲಾ!

## ಬಹುಮಾನಿತ ಪ್ರಶ್ನೆ

ಎಂ.ಎಸ್. ಗುರುರಾಜಾಚಾರು, ಬಳ್ಳಾರಿ
*ಪದ್ಯ ಎಂದರೆ ಪ್ರೇಯಸಿ; ವ್ಯಾಕರಣ ಎಂದರೆ ಹೆಂಡತಿ; ಕಥೆ ಎಂದರೆ?*
ಲೇಟಾಗಿ ಮನೆಗೆ ಬಂದ ಪತಿ ಲೇಟಾದುದಕ್ಕೆ ನೀಡುವ ವಿವರಣೆ.

ಎಸ್ಸೆನ್ನೆ, ಕಡೂರು
*ಗಂಡುಮಕ್ಕಳಿಗಿಂತ ಹೆಣ್ಣುಮಕ್ಕಳೇ ವಾಸಿ ಎನ್ನುವವರೂ ಗಂಡುಮಗುವನ್ನೇ ಬಯಸುತ್ತಾರೆ. ಏಕೆ?*
ಇಹಕ್ಕೆ ಮಗಳೇ ಸೂಕ್ತವಾದರೂ ಪರಕ್ಕೆ ಹೋಗಲು ನೀಡುವ ವೀಸಾ ಆದ ಪಿಂಡಕ್ಕೆ ಗಂಡೇ ಅಗತ್ಯವಂತೆ.

ಬಿ. ಚಂದ್ರೇಗೌಡ, ಬೆಂಗಳೂರು
*ಮಾತು ಮಾಣಿಕ್ಯ ಆಗುವುದು ಯಾವಾಗ?*
ಮಾತನಾಡುವವನು ಚಾಣಕ್ಯ ಆದಾಗ.

ನರಸಿಂಹ ಪೈ, ಹೊನ್ನಾವರ
*ನದಿಗಳಿಗೆ ಹೆಂಗಸರ ಹೆಸರು. ಪರ್ವತಗಳಿಗೆ ಗಂಡಸರ ಹೆಸರು. ಏಕೆ?*



ಸರಿದಾಡಿಕೊಂಡಿರುವುದರಿಂದ; ಬಿದ್ದಲ್ಲೇ ಬಿದ್ದಿರುವುದರಿಂದ.

ಪಿ.ಎನ್. ಶ್ರೀವತ್ಸ, ಬೆಂಗಳೂರು
*ಭಾರತದಲ್ಲಿ ಋಷಿಗಳಿದ್ದಂತೆ ವಿದೇಶಗಳಲ್ಲಿ ಯಾಕಿಲ್ಲ?*
ಶಾಲೆಯಿದ್ದಲ್ಲಿ ಮೇಷ್ಟ್ರು; ಋಷಿಗಳು ಅಂದಿನ ಗುರುಗಳು, ಭಾರತ ಜಗದ ಶಾಲೆ.

ವಿ.ಎಸ್. ಹಿಂದೂಪುರ, ಬಳ್ಳಾರಿ
*ವ್ಯಾಪಾರಿಗಳಿಗೆ ಗ್ರಾಹಕರು ಅನ್ನದಾತರು; ವೈದ್ಯರಿಗೆ ರೋಗಿಗಳು ಅನ್ನದಾತರು. ಮಂತ್ರಿಗಳಿಗೆ?*
ಅನ್ನದಾತರು ಇಲ್ಲ; ಎಲ್ಲರೂ ಅವರನ್ನು ಏನಾದರೂ ಅನ್ನುವವರೇ!

■ ರಾಮ್